Paddy and Ragi Crops Grown under Marconahalli Reservoir.

*Q.—460. Sri N. HUTCHAMASTI GOWDA (Huliyurdurga).—

Will the Chief Minister be pleased to state :—

(*a*) the number of acres wherein paddy and ragi crops are grown during this summer under Marconahalli Reservoir in Kunigal Taluk ;

(*b*) the reason for growing of crops during this summer ;

(*c*) who has taken the decision ;

(*d*) whether the ryots would get any yield from the present crops ;

(*e*) if not, who will be responsible for this great loss ?

A.—Sri S. NIJALINGAPPA (Chief Minister).—

(*a*) About 7,000 acres of padddy and 1,000 acres of Regi are grown directly under the achkat area. Under the pickup Seapage and Tanks of the Reservoir, about 3,000 acres of Paddy and 500 Acres of Ragi are grown.

(*b*) The reservoir got a good inflow of water during September and October. As there was sufficient water for raising summer crop, it was decided to take summer crop making the best use of water in view of the present difficult food situation.

(*c*) The decision was taken by a joint meeting of the achkatdars, the Deputy Commissioner the Executive Engineer and the Project Officer.

(*d*) Yes.

(*e*) Does not arise.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನ್ಯಾಮಿ, ಮಾರ್ಕೋನಹಳ್ಳಿ ಜಲಾಶಯದ ಹಿಂದೆ ಇರತಕ್ಕ ಒಟ್ಟು ಅಚ್ಚುಕಟ್ಟುಪ್ರದೇಶ ಎಷ್ಟು ? ಎಲ್ಲಾ ಪ್ರದೇಶದಲ್ಲಿಯೂ ಬೇಸಿಗೆ ಬೆಳೆಯನ್ನು ಬೆಳೆಯುವುದಕ್ಕೆ ಆಗಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾರ್ಕೋನಹಳ್ಳಿ ಜಲಾಶಯದ ಹಿಂದೆ ಇರತಕ್ಕ ಅಚ್ಚು ಕಟ್ಟು ಪ್ರದೇಶ 8,461 ಎಕರೆ. ಅದರಲ್ಲಿ ಜಲಾಶಯದ ನೀರು, ಮಳೆ ನೀರು ಸೀಪೇಜ್ ನೀರು ಎಲ್ಲಾ ಸೇರಿಕೊಂಡು 4 ಸಾವಿರ ಎಕರೆಯಲ್ಲಿ ಬೆಳೆ ಆಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಲ್ಲಾ ಅಚ್ಚುಕಟ್ಟು ಪ್ರದೇಶದಲ್ಲಿಯೂ ಬೇಸಿಗೆ ಬೆಳೆಯನ್ನು ಬೆಳೆಯುವುದಕ್ಕೆ ಆಗಲಿಲ್ಲ, ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಾಕಡೆಯಲ್ಲಿಯೂ ಬೆಳೆಯನ್ನು ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ಮಳೆ ಬಾರದಿದ್ದರೆ ಆಗುವುದಿಲ್ಲ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಮಳೆ ಬಂದಮೇಲೆ ರಾಗಿ ಮತ್ತು ಬತ್ತ ಬೆಳೆಯುವುದಕ್ಕೆ ಅವಕಾಶವನ್ನು ಕೊಟ್ಟಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಧ್ಯೆ ಡೆಪ್ಯುಟಿ ಕಮೀಷನರು, ಎಗ್ಸಿಕ್ಯುಟೀವ್ ಇಂಜನಿಯರು ಮತ್ತು ಅಗ್ರಿಕಲ್ಚರಲ್ ಜಾಯಿಂಟ್ ಡೈರೆಕ್ಟರು ಈ ಮೂರುಜನಗಳೂ ಮತ್ತು ಆ ಸ್ಥಳದ ಪ್ರತಿನಿಧಿಗಳು ಎಲ್ಲರೂ ಆ ಸ್ಥಳವನ್ನು ಇನ್‌ಸ್ಪೆಕ್ಟ್ ಮಾಡಿ ಬೆಳೆ ಸರಿಯಾಗಿ ಆಗಿಲ್ಲ ಎಂದು ಕಣ್ಣಾರೆ ನೋಡಿಬಂದದ್ದು ಸರ್ಕಾರಕ್ಕೆ ವರದಿ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಬೆಳೆ ಬೆಳೆಯುವುದಕ್ಕೆ ಅವಕಾಶವನ್ನು ಕೊಟ್ಟಿದೆ. ರೈತರಿಗೆ ಎಷ್ಟು ನೀರನ್ನು ಕೊಡಬೇಕೆಂದು ಇತ್ತೀಚೆ ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ನೀರನ್ನು ಕೊಟ್ಟಿದ್ದಾರೆ. ರೈತರು 3 ತಿಂಗಳು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬದಲಾಗಿ 5 ತಿಂಗಳ